**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1069/2018**

| | | |
|---|---|---|
| ಸಾಕ್ಷಿದಾರರ ಹೆಸರು | : ಅಬ್ದುಲ್ | ಫ್ರಾಸಾ-2 |
| ತಂದೆಯ ಹೆಸರು | : ಇಸ್ಮಾಯಿಲ್ | ಚಾಸಾ-2 |
| ವಯಸ್ಸು | : 54 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಅಕೌಂಟೆಂಟ್ | ದಿನಾಂಕಃ 23.09.2025 |
| ವಾಸಸ್ಥಳ | : ಮಂಜನ್ ಪಲ್ಕೇಮನೆ, ಪುಂಜಾಲಕಟ್ಟೆ | |

**:ಮುಖ್ಯ ವಿಚಾರಣೆ: ಫ್ರಾಜ್ಞ್ಯಾಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯು ನನ್ನ ತಂಗಿಯ ಗಂಡ. ಚಾಸಾ-1 ನನ್ನ ತಂಗಿ. ಚಾಸಾ-3 ನನ್ನ ತಾಯಿ. ಚಾಸಾ-4 ನನ್ನ ಅಕ್ಕ. ಚಾಸಾ-5 ಮತ್ತು 6 ನನ್ನ ತಮ್ಮಂದಿರು. ಚಾಸಾ-7 ನನ್ನ ಭಾವ. ಚಾಸಾ-8 ರಿಂದ 12 ರವರ ಪರಿಚಯ ನನಗಿದೆ.

ದಿ.21.08.2008 ರಂದು ಪುಂಜಾಲಕಟ್ಟೆಯ ಬದ್ರಿಯಾ ಜುಮ್ಮಾ ಮಸೀದಿಯಲ್ಲಿ ಚಾಸಾ-1 ಮತ್ತು ಆರೋಪಿಯ ಮದುವೆಯಾಗಿದೆ. ಆರೋಪಿಯ ಬೇಡಿಕೆಯಂತೆ ಮದುವೆ ಸಮಯಕ್ಕೆ ಅವರಿಗೆ ರೂ.3 ಲಕ್ಷ ಹಣ, ರೂ.15,000/- ವಾಚ್, ಒಂದು ಜೊತೆ ಸೂಟ್ ನ್ನು ವರದಕ್ಷಿಣೆಯಾಗಿ ಪಡೆದಿದ್ದಾರೆ. ಮುಂದುವರೆದು ಆರೋಪಿಯ ಮಾತಿನಂತೆ ಚಾಸಾ-1 ರವರಿಗೆ 80 ಗ್ರಾಂ ಚಿನ್ನದ ನೆಕ್ಲೇಸ್, 25 ಗ್ರಾಂ ನ ಮತ್ತೊಂದು ಚಿನ್ನದ ನೆಕ್ಲೇಸ್, 64 ಗ್ರಾಂ ನ ಚಿನ್ನದ ಸೊಂಟಪಟ್ಟಿ, 56 ಗ್ರಾಂ 4 ಚಿನ್ನದ ಬಳೆಗಳು, 14 ಗ್ರಾಂ ನ ಒಂದು ಜೊತೆ ಚಿನ್ನದ ಓಲೆ. ಹೀಟೆ ಒಟ್ಟು ಸುಮಾರು ಸುಮಾರು 240 ಗ್ರಾಂ ಚಿನ್ನವನ್ನು ಹಾಕಿದ್ದೆವು. ಮದುವೆ ಕಾಲಕ್ಕೆ ಊಟಉಪಚಾರದ ಖರ್ಚು ರೂ.63,000/- ಹಣವನ್ನು ನಾವೇ ಬರಿಸಿದ್ದೇವೆ. ಮದುವೆ ನಂತರ ಚಾಸಾ-1 ರವರು ಆರೋಪಿಯೊಂದಿಗೆ ಅವರ ಮನೆಯಲ್ಲಿ ವಾಸಿಸುತ್ತಿದ್ದರು. 20 ದಿನಗಳ ಕಾಲ ಅನ್ಯೂನ್ಯವಾಗಿದ್ದರು. ಆನಂತರ ಆರೋಪಿ ಆಟೋ ಖರೀದಿಸುವ ಕಾರಣಕ್ಕಾಗಿ ರೂ.1 ಲಕ್ಷ ಹಣವನ್ನು ಬೇಡಿಕೆ ಇಟ್ಟರು. ಈ ವಿಚಾರವನ್ನು ಚಾಸಾ-1 ರವರು ನಮಗೆ ತಿಳಿಸಿದ್ದರು. ನಮಗೆ ಸಾಲ ಇದ್ದ ಕಾರಣ ಆರೋಪಿಗೆ ಹಣ ಕೊಡಲಾಗಿಲ್ಲ. ಈ ಕಾರಣ ಆರೋಪಿ ಚಾಸಾ-1 ರವರಿಗೆ ವರದಕ್ಷಿಣೆ ಕಿರುಕುಳ ಕೊಡಲು ಪ್ರಾರಂಭಿಸಿದರು. ಈ ಕಾರಣ ಚಾಸಾ-1 ರವರು 3 ಬಾರಿ ತವರು ಮನೆಗೆ ಬಂದಿದ್ದರು. ಹಾಗೇ ತವರು ಮನೆಗೆ ಬಂದಿದ್ದಾಗ ನಾವು ಚಾಸಾ-1 ರವರಿಗೆ ಬುದ್ದಿ ಹೇಳಿ ಆರೋಪಿಯ ಮನೆಗೆ ಬಿಟ್ಟು ಬಂದಿದ್ದೆವು.

ಆರೋಪಿಯು ಪದೇಪದೇ ಚಾಸಾ-1 ರವರಿಗೆ ಕಿರುಕುಳ ನೀಡುತ್ತಿದ್ದ ಕಾರಣ ದಿ.17.03.2011 ರಂದು ಆರೋಪಿಯು ಚಾಸಾ-1 ಮತ್ತು ಅವರ ಮಗಳನ್ನು ಹಣ ತೆಗೆದುಕೊಂಡು ಬರುವಂತೆ ಮನೆಯಿಂದ ಹೊರಗೆ ಹಾಕಿದರು. ಈ ವಿಚಾರವನ್ನು ನಮಗೆ ತಿಳಿಸಿದ್ದ ಕಾರಣ ಚಾಸಾ-6 ರವರನ್ನು ಮೂಡಿಗೆರೆಗೆ ಕಳುಹಿಸಿ ಚಾಸಾ-1 ರವರನ್ನು ವಿಚಾರಿಸುವಂತೆ ಹೇಳಿದ್ದೆವು. ಚಾಸಾ-6 ರವರು ಮೂಡಿಗೆರೆಗೆ ಬಂದಿದ್ದಾಗ ಆರೋಪಿಯು ತನಗೆ ಹಣ ಕೊಡದಿದ್ದರೆ ಚಾಸಾ-1 ಮತ್ತು ಮಗುವನ್ನು ಮನೆಗೆ ಸೇರಿಸುವುದಿಲ್ಲ ಎಂದು ಹೇಳಿದ್ದರು. ದಿ.24.12.2011 ರಂದು ಪುಂಜಾಲಕಟ್ಟೆಯ ನಂದಗೋಕುಲ ಹಾಲ್ ನಲ್ಲಿ ಎರಡು ಕಡೆಯ ಹಿರಿಯರನ್ನು ಸೇರಿಸಿ ಪಂಚಾಯಿತಿ ಮಾಡಿಸಿದ್ದೆವು. ಅಲ್ಲಿ

ಚಾಸಾ-1 ರವರನ್ನು ತನ್ನೊಂದಿಗೆ ಕರೆದುಕೊಂಡು ಹೋಗಲು ಆರೋಪಿಗೆ ತಿಳಿಸಿದ್ದರೂ ಸಹಾ ಆರೋಪಿ ಕರೆದುಕೊಂಡು ಹೋಗಲಿಲ್ಲ. ದಿ.27.11.2012 ರಂದು ಪುಂಜಾಲಕಟ್ಟೆ ಮಸೀದಿಯವರು ಮೂಡಿಗೆರೆ ಬಾಬು ನಗರ ಮಸೀದಿಯವರಿಗೆ ಪತ್ರ ಬರೆದು ಆರೋಪಿ ಮತ್ತು ಚಾಸಾ-1 ರವರು ಸಮಸ್ಯೆ ಬಗೆಹರಿಸಲು ಕೇಳಿದ್ದರು. ದಿ.08.12.2012 ರಂದು ಮೂಡಿಗೆರೆ ಮಸೀದಿಯವರು ಆ ಅರ್ಜಿಯನ್ನು ವಿಚಾರಣೆಗೆ ತೆಗೆದುಕೊಂಡು ಚಾಸಾ-1 ರವರನ್ನು ತನ್ನೊಂದಿಗೆ ಕರೆದುಕೊಂಡು ಬರುವಂತೆ ಆರೋಪಿಗೆ ಹೇಳಿದ್ದರು. ಆ ಸಮಯಕ್ಕೆ ಬೇರೆ ಮನೆ ಮಾಡಿ ಚಾಸಾ-1 ರವರನ್ನು ಕರೆದುಕೊಂಡು ಬರುತ್ತೇನೆ ಎಂದು ಹೇಳಿದ್ದರು. ಆದರೆ ಆ ಪ್ರಕಾರ ನಡೆದುಕೊಂಡಿಲ್ಲ. ಆನಂತರ ಆರೋಪಿಯು ಮತ್ತೊಂದು ಮದುವೆಯಾಗಿದ್ದಾರೆ ಎಂದ ನಮಗೆ ತಿಳಿದುಬಂತು.

ದಿ.13.06.2018 ರಂದು ಆರೋಪಿಯು ನಮ್ಮ ಮನೆಗೆ ಬಂದಾಗ 2 ನೇ ಮದುವೆಯ ಬಗ್ಗೆ ಪ್ರಶ್ನಿಸಿದಾಗ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಿ ಹೋದರು. ಆ ಸಮಯಕ್ಕೆ ಚಾಸಾ-1 ರವರು ಅಸ್ವಸ್ಥರಾಗಿದ್ದ ಕಾರಣ ಅವರನ್ನು ಪುಂಜಾಲಕಟ್ಟೆಯ ಸರ್ಕಾರಿ ಆಸ್ಪತ್ರೆಗೆ ಸೇರಿಸಿ, ದಿ.14.06.2018 ರಂದು ಚಾಸಾ-1 ರವರು ಆರೋಪಿಯ ವಿರುದ್ಧ ಪುಂಜಾನಲಕಟ್ಟೆಯ ಪೋಲಿಸ್ ಠಾಣೆಗೆ ದೂರು ನೀಡಿದ್ದಾರೆ. ಸದರಿ ಪೋಲಿಸರು ಆರೋಪಿಯನ್ನು ವಿಚಾರಣೆಗೆ ಕರೆದರು ಅವರು ಬಂದಿರಲಿಲ್ಲ. ದಿ.02.07.2018 ರಂದು ಚಾಸಾ-1 ರವರು ಬೆಳ್ತಂಗಡಿಯ ಮಹಿಳಾ ಸಾಂತ್ವಾನ ಕೇಂದ್ರಕ್ಕೆ ದೂರು ಕೊಟ್ಟಿದ್ದಾರೆ. ಸದರಿರವರು ದಿ.16.07.2018 ರಂದು ಎರಡೂ ಕಡೆಯವರನ್ನು ವಿಚಾರಣೆಗೆ ಕರೆಸಿದ್ದು ಅಲ್ಲಿ ಆರೋಪಿಯು ಒಂದು ವಾರದೊಳಗೆ ನಿರ್ಧಾರ ತಿಳಿಸುತ್ತೇನೆ ಎಂದು ಹೇಳಿ ನಂತರ ಯಾವುದೇ ಪ್ರತಿಕ್ರಿಯೇ ನೀಡಿಲ್ಲ. ಈ ಕಾರಣ ದಿ.01.08.2018 ರಂದು ಚಾಸಾ-1 ರವರು ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಪೋಲಿಸರು ಇಬ್ಬರನ್ನು ವಿಚಾರಣೆ ಮಾಡಿದ್ದು ಅವರು ಯಾವುದೇ ನಿರ್ಧಾರಕ್ಕೆ ಬರದ ಕಾರಣ ಪ್ರಕರಣ ದಾಖಲಿಸಿದ್ದಾರೆ.

**<u>ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.